# ಅಪೂರ್ವಳನ್ನು ಕಂಗೆಡಿಸಿದ ಕಟುಸತ್ಯ

‘ವಿದ್ಯಂಗೆ ಅಥವಾ ಆದರ್ಶಂಗೆ.. ಈಗ ಈ ವಿಷ್ಯ ಹೇಳೋದು ಬೇಡಾ.. ಮದ್ವೆ ಆಮಂತ್ರಣ ನೀಡಲು ಹೋದಾಗ ಗೊತ್ತಾದ್ರೆ ಸಾಕು..’ ಎಂದಿದ್ದರು ವಿಜಯಮ್ಮ. ಹಾಗಾಗಿ ನಿಶ್ಚಿತಾರ್ಥಕ್ಕೆ ಆದರ್ಶನ ಮನೆಯವರಿಗೆ ಆಹ್ವಾನವಿರಲಿಲ್ಲ. ಎರಡು ಮನೆಯವರು ಮಾತ್ರ ಸರಳವಾಗಿ ನಿಶ್ಚಿತಾರ್ಥ ನೆರವೇರಿಸುವುದೆಂದು ತೀರ್ಮಾನವಾಗಿತ್ತು. ನಿಶ್ಚಿತಾರ್ಥಕ್ಕೆಂದು ವಿಜಯಮ್ಮ ಅಪೂರ್ವಳನ್ನು ಕರೆದೊಯ್ದು ಬೆಲೆಬಾಳುವ ಸೀರೆ, ಒಡವೆ ಖರೀದಿಸಿ ಕೊಟ್ಟರು.

‘ಇದೆಲ್ಲ ಯಾಕೆ..?’ ಅಪೂರ್ವ ಅವರ ಉದಾರತೆಯ ಭಾರಕ್ಕೆ ಕುಗ್ಗುವಂತೆ ನುಡಿದಳು.

‘ನೀನು ಚೆಂದ ಕಾಣ್ಬೇಕು.. ಉಟ್ಟು, ತೊಟ್ಟು ಖುಷಿಯಾಗಿರ್ಬೇಕು.. ನಿಮ್ಮ ಸಂಭ್ರಮ ನಾವು ಕಣ್ತುಂಬಾ ನೋಡ್ಬೇಕು..’ ವಿಜಯಮ್ಮ ನುಡಿದಾಗ ಅತ್ತೆಯ ಸ್ಥಾನದಲ್ಲಿ ತನ್ನ ತಾಯಿಯೇ ನಿಂತಂತೆ ಭಾಸವಾಗಿ ಕಣ್ಣು ಮಂಜಾಗಿತ್ತು.

‘ನನ್ನ ತಾಯೀನ ನನ್ನ ಬುದ್ಧಿ ಬಲಿಯುವ ಮೊದಲೇ ಕಳ್ಕೊಂಡೆ.. ತಂದೆನೂ ಇಲ್ಲದಂತಾಯಿತು.. ಆ ಪ್ರೀತಿ ಏನೂಂತ ಅನುಭವಿಸುವ ಭಾಗ್ಯವೇ ನನಗಿರಲಿಲ್ಲ.. ಈಗ ಭಗವಂತ ನಿಮ್ಮ ರೂಪದಲ್ಲಿ ನನಗೆ ಅದನ್ನು ನೀಡ್ತಾ ಇದ್ದಾನೆ..’ ಹೃದಯ



ವಿಜಯಕುಮಾರಿ